ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾದ ದಿನಾಂಕಃ 06.11.2025

ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ. ಹೆಚ್.ಆರ್.ಎಸ್ ವಕೀಲರಿಂದ

ವಾದಿಯು ಅಧಿಕಾರ ಪತ್ರವನ್ನು ನಾರಾಯಣ ಎಂಬ ಸಾಕ್ಷಿದಾರರ ಸಮಕ್ಷಮ ಬರೆದುಕೊಟ್ಟಿರುತ್ತಾರೆ. ಅವರು ಮಲ್ಲೇನಹಳ್ಳಿ ಗ್ರಾಮದವರಾಗಿರುತ್ತಾರೆ. ಸದರಿ ಅಧಿಕಾರ ಪತ್ರಕ್ಕೆ ವಕೀಲರ ಸಹಿಯನ್ನು ಮಲ್ಲೇನಹಳ್ಳಿಯಲ್ಲಿ ಮಾಡಿಸಲಾಗಿರುತ್ತದೆ. ಅಧಿಕಾರ ಪತ್ರದಲ್ಲಿರುವ ವಾದಿಯ ಸಹಿ ಮತ್ತು ವಾದಪತ್ರದಲ್ಲಿ ಇರುವ ವಾದಿಯ ಸಹಿ ಬೇರೆ ಬೇರೆ ಇದೆ ಎಂದರೆ ಸರಿಯಲ್ಲ. ವಾದಿಯು ಆರೋಗ್ಯದಿಂದ ಇದ್ದಾರೆ, ಸಾಕ್ಷಿ ಮುಂದುವರಿದು ಅವರಿಗೆ ಆರೋಗ್ಯ ಸಮಸ್ಯೆ ಇದೆ ಎನ್ನುತ್ತಾರೆ. ಆಕೆಯನ್ನು ಕರೆದುಕೊಂಡು ಬಂದು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಆಕೆಗೆ ತೆರೆದ ನ್ಯಾಯಾಲಯದ ಆವರಣದಲ್ಲಿಯೆ ಆರೋಗ್ಯ ಸಮಸ್ಯೆ ಆಗಿತ್ತು ಎಂದು ನುಡಿಯುತ್ತಾರೆ. ವಾದಿಯು ಮಾನಸಿಕ ಅಸ್ವಸ್ಥಳಾಗಿದ್ದು ನಾನು ನನ್ನ ಅನುಕೂಲಕ್ಕೆ ತಕ್ಕಂತೆ ದಾವಾ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಯ ಗಂಡ ಮೃತರಾದ ಕಾಲದಿಂದಲೂ ಆಕೆಯು ನಮ್ಮ ಮನೆಯಲ್ಲಿಯೆ ಇದ್ದಾರೆ.

2. ವಾದಿಯ ಗಂಡನಾದ ನಾಗೇಗೌಡರರವರ ಅಂತ್ಯಕ್ರಿಯೆಯನ್ನು ಡಿಂಕಶೆಟ್ಟಿಹಳ್ಳಿ ಗ್ರಾಮದಲ್ಲಿ ಮಾಡಲಾಗಿದೆ ಎಂದರೆ ಸರಿ. ಅವರ ಅಂತ್ಯ ಕ್ರಿಯೆಯನ್ನು ಮತ್ತು ಹನ್ನೊಂದು ದಿಗಳ ತಿಥಿ ಕಾರ್ಯವನ್ನು 2ನೇ ಪ್ರತಿವಾದಿಯೆ ನೆರವೇರಿಸಿರುತ್ತಾರೆ ಎಂದರೆ ಸುಳ್ಳು. ವಾದಿಯ ಗಂಡನಿಗೆ ಅವರ ಸ್ವಗ್ರಾಮದಲ್ಲಿ ಎಷ್ಟು ಎಕರೆ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ಮೃತ ನಾಗೇಗೌಡರ ಜೀವಿತಾ ಕಾಲದಲ್ಲಿ ನಮಗೂ ಮತ್ತು ಅವರಿಗೂ ಯಾವುದೇ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಯ ಗಂಡ ಮತ್ತು 2ನೇ ಪ್ರತಿವಾದಿ ಅನ್ಯೋನ್ಯವಾಗಿದ್ದ ಕಾರಣ ಇಬ್ಬರೂ ಒಟ್ಟಿಗೆ ಸೇರಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ.

3. ಮೃತ ನಾಗೇಗೌಡರು 2ನೇ ಪ್ರತಿವಾದಿಯ ದೊಡ್ಡಪ್ಪನ ಮಗ ಎಂದರೆ ಸರಿಯಲ್ಲ. ಅವರ ಯೋಗಕ್ಷೇಮವನ್ನು 2ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಅಧಿಕಾರ ಪತ್ರಕ್ಕೆ ಸಹಿ ಹಾಕಿರುವ ಅವರನ್ನು ನ್ಯಾಯಾಲಯಕ್ಕೆ ಕರೆಯಿಸಿ ಸಾಕ್ಷ್ಯ ನುಡಿಸಲು

ನನಗೆ ತೊಂದರೆ ಇಲ್ಲ. ವಾದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಆಕೆಯ ಬಳಿ ದಾವಾ ದಾಖಲಿಸಿರುವ ಬಗ್ಗೆ ತಿಳಿಸಲು ತೊಂದರೆ ಇದೆಯಾ ಎಂದರ ಸಾಕ್ಷಿಯು ಆಕೆಗೆ ಆರೋಗ್ಯ ಸರಿ ಇಲ್ಲ ಮೊದಲೆಲ್ಲ ಅವರೇ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದರು ಎಂದು ನುಡಿಯುತ್ತಾರೆ. ವಾದಿಯನ್ನು ನ್ಯಾಯಾಲಯಕ್ಕೆ ವಿಚಾರಣೆಗೆ ಒಳಪಡಿಸಿದರೆ ಸತ್ಯಾಂಶ ತಿಳಿಯುತ್ತದೆ ಎಂದು ನಾನು ಆಕೆಯಿಂದ ಅಧಿಕಾರ ಪತ್ರ ಪಡೆದಿರುತ್ತೇನೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯು ನಾಮಿನಿ ಆಗಿರುವ ಕಾರಣ ಮೃತ ನಾಗೇಗೌಡರ ಖಾತೆಯಲ್ಲಿರುವ ಮೊತ್ತಕ್ಕೆ ಅವರೇ ಹಕ್ಕುದಾರರ ಎಂದರೆ ಸರಿಯಲ್ಲ. ಮೃತ ನಾಗೇಗೌಡರ ಖಾತೆಯಲ್ಲಿ ಹಣ ಇರುವ ಸಂಗತಿ ತಿಳಿದು ನಾನು ವಾದಿಯನ್ನು 2ನೇ ಪ್ರತಿವಾದಿಯ ಮನೆಯಿಂದ ಕರೆದುಕೊಂಡು ಹೋಗಿ ನಮ್ಮ ಮನೆಯಲ್ಲಿ ಇರಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ಬರುವ ಕುಟುಂಬ ವೇತನವನ್ನು ಸಹ ನಾನೇ ಪಡೆದುಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು ಮೃತ ನಾಗೇಗೌಡ 2ನೇ ಪ್ರತಿವಾದಿಯ ಮನೆಯಲ್ಲಿ ಇದ್ದರು ಆ ಕಾರಣದಿಂದ ಮೃತ ನಾಗೇಗೌಡರವರು 2ನೇ ಪ್ರತಿವಾದಿಯನ್ನು ನಾಮಿನಿಯನ್ನಾಗಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು 2ನೇ ಪ್ರತಿವಾದಿಗೆ ತೊಂದರೆ ಕೊಡಲು ವಾದಿಯ ಮುಖಾಂತರ ದಾವಾ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡಿ ನಿಪಿ1 ಅಧಿಕಾರ ಪತ್ರ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.